## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **85 (103)**

ಸದಸ್ಯರ ಹೆಸರು : ಶ್ರೀ. ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 13.02.2023

ಉತ್ತರಿಸುವ ಸಚಿವರು : ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ಮಕ್ಕಳ ಉಚಿತ ಶಿಕ್ಷಣ ಮತ್ತು ಕಡ್ಡಾಯ ಶಿಕ್ಷಣವನ್ನು 8ನೇ ತರಗತಿಯಿಂದ 10ನೇ ತರಗತಿಯವರೆಗೆ ಏರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ? | ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ 2009ರ ಕಾಯ್ದೆಯ ನಿಯಮ 3ರನ್ವಯ 6 ರಿಂದ 14 ವರ್ಷದ ಮಕ್ಕಳಿಗೆ ಪ್ರಾಥಮಿಕ ಹಂತದವರೆಗೆ ಉಚಿತ ಶಿಕ್ಷಣವನ್ನು ನೀಡಲು ಸೂಚಿಸಲಾಗಿದ್ದು, 14 ವರ್ಷ ಮೀರಿದ ಮಕ್ಕಳು ಈ ನಿಯಮಗಳ ವ್ಯಾಪ್ತಿಗೆ ಒಳಪಡುವುದಿಲ್ಲ ಈ ಬಗ್ಗೆ ಯಾವುದೇ ಪ್ರಸ್ತಾವನೆಯು ಇರುವುದಿಲ್ಲ. |
| ಆ. | ರಾಜ್ಯದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳು ಈ ಉಚಿತ ಶಿಕ್ಷಣ ಹಕ್ಕಿನ ಅಡಿಯಲ್ಲಿ ನೆರೆಹೊರೆಯ ಶಾಲೆಗಳಿಗೆ ದಾಖಲಾತಿಯಾಗಿದ್ದು, 8ನೇ ತರಗತಿಯ ನಂತರ ಸೌಲಭ್ಯ ದೊರೆಯದ ಅನೇಕ ಮಕ್ಕಳು ಶಾಲೆಗಳಿಗೆ ಆರ್ಥಿಕ ಕಾರಣಗಳಿಂದ ದಾಖಲಾಗದೆ ಮನೆಯಲ್ಲಿಯೇ ಇರಬೇಕಾದ ಸಂಭವಗಳು ಇರುವುದರಿಂದ ಇಂತಹ ಮಕ್ಕಳ ಮುಂದಿನ ಶಿಕ್ಷಣಕ್ಕಾಗಿ ಸರ್ಕಾರ ಕೈಗೊಂಡ ಕ್ರಮಗಳೇನು; | ಸರ್ಕಾರಿ / ಅನುದಾನಿತ ಶಾಲೆಗಳಲ್ಲಿ ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಗೆ ಅವಕಾಶವಿದ್ದು, ಶಾಲೆಗಳಲ್ಲಿ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಬಿಸಿಊಟ ಸೌಲಭ್ಯಗಳನ್ನು ನೀಡಲಾಗುತ್ತಿದೆ. |
| ಇ. | ಶಾಲೆಯನ್ನು ತೊರೆದ ಮಕ್ಕಳು ಸಾಮಾನ್ಯವಾಗಿ ದೇಶದ ಕಾರ್ಮಿಕ ಕಾಯ್ದೆಯ ವಿರುದ್ಧವಾಗಿ ಬಾಲ ಕಾರ್ಮಿಕರಾಗಿದ್ದು ಸರ್ಕಾರವು ಈ ಉಚಿತ ಶಿಕ್ಷಣ ಕಾಯ್ದೆಯನ್ನು 8 ರಿಂದ 10ನೇ ತರಗತಿವರೆಗೆ ಹೆಚ್ಚಿಸಲು ಕ್ರಮಕೈಗೊಳ್ಳುವುದೇ? | ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಸಂಖ್ಯೆ: ಇಪಿ 30 ಎಸ್‌ಎಲ್‌ಬಿ 2023

(ಬಿ.ಸಿ ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ
ಸಕಾಲ ಸಚಿವರು